ಸಂಪೂರ್ಣ ಕಾಮಗಾರಿ ಮುಗಿಸಿ ನೀರು ಕೊಡುತ್ತೇವೆ ಎಂದು ಹೇಳಿದ್ದರು. ಈಗೇನು ಅನುಮಾನ ಅಂದರೆ ಕಾಮಗಾರಿಗಳು ನಡೆಯುತ್ತವೋ ಇಲ್ಲವೋ? ಯಾವಕಾರಣದಿಂದ ಕೆಲಸಗಳು ನಿಂತಿವೆ? ನೀವು ಟೆಂಡರ್ ಮಾಡುತ್ತೀರೋ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಕೊಟ್ಟು ಕೆಲಸ ಮಾಡುತ್ತೀರೋ ನಮಗೆ ಸಂಬಂಧ ಇಲ್ಲ. ಆದರೆ ಈ ಸದನದಲ್ಲಿ ತಾವು ಮಾತು ಕೊಟ್ಟಿರುವ ತರಹ ಈ ವರ್ಷದ ಅಂತ್ಯದೊಳಗೆ ಕುಣಿಗಲ್ ಕೆರೆವರೆಗೂ ಸಂಪೂರ್ಣ ಕಾಮಗಾರಿ ಮುಗಿಸುವ ಕೆಲಸ ಮಾಡುತ್ತೀರಾ? ಇಲ್ಲದಿದ್ದರೆ, ನಾನು ಬಂದು ತಮ್ಮ ಮನೆ ಮುಂದೆ ಧರಣಿ ಕೂತುಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಅಧ್ಯಕ್ಷರೇ 137ರಿಂದ 165ರವರೆಗೆ ವಿವಿಧ ಹಂತಗಳಲ್ಲಿ ಕೆಲಸ ನಡೆದಿದೆ 165ರಿಂದ 124ಕ್ಕೆ ಟ್ಯಾಕಲ್ ಮಾಡುವುದಕ್ಕೆ ಎನ್‌ಟ್ರಸ್ಟ್ ಮಾಡಿದ್ದೇವೆ, ಮಣ್ಣಿನ ಕೆಲಸವೂ ಇದೆ. 174 ರಿಂದ 187ಕ್ಕೆ ಡಿಸೆಂಬರ್ ಒಳಗಡೆ ಮಣ್ಣಿನ ಕೆಲಸ ಮುಗಿಸುತ್ತೇವೆ. ಈ ವರ್ಷ 90 ಕೋಟಿ ಹಣ ಎತ್ತಿಟ್ಟಿದ್ದೇವೆ. ಮಾರ್ಚ್ ಒಳಗಡೆ ಕುಣಿಗಲ್‌ಗೆ ನೀರು ತಲುಪುವ ಎಲ್ಲಾ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ, ಅವರು ಒಂದು ಒಳ್ಳೆಯ ಮಾತು ಹೇಳುತ್ತಾರೆ ಎಂದು ತಿಳಿದಿದ್ದೆ : 586 ಕೋಟಿಯಲ್ಲಿ 400 ಕೋಟಿಯನ್ನು ಮೂರೂವರೆ ವರ್ಷಗಳಲ್ಲಿ ಖರ್ಚು ಮಾಡಿರುವ ಸರ್ಕಾರ ನಮ್ಮದು. ನೀರು ತಗೊಂಡಿರುವ ನೀವು ಸಂತೋಷ ಪಡಲಿಲ್ಲ ಅಂದರೆ ಏನು ನಾನು ಮಾಡಬೇಕೋ ಅರ್ಥವಾಗುತ್ತಿಲ್ಲ. ಕೆಲಸ ಸ್ವಲ್ಪ ನಿಧಾನವಾಗಲು ಕಾರಣವೇನೆಂದರೆ 36 ಕೋಟಿ ಪೆಂಡಿಂಗ್‌ಬಿಲ್ ಇತ್ತು. 90 ಕೋಟಿ ಇಟ್ಟಿದ್ದರೆ 123 ಕೋಟಿ ಖರ್ಚಾಗಿತ್ತು. ಈ ಸಾರಿ ನಾವು ಪ್ರಾವಿಷನ್ ಮಾಡಿಕೊಂಡಿದ್ದೇವೆ. ಆದಷ್ಟು ಬೇಗ ಇನ್ನು 25-30 ಕೋಟಿ ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡಿ ಇದು ಡಿಸೆಂಬರ್‌ಗೆ ಆಗುವುದಿಲ್ಲ. ಮೂರು ತಿಂಗಳು ಲೇಟ್ ಆಗುತ್ತದೆ. ಕುಣಿಗಲ್‌ಗೆ ನೀರನ್ನು ಬಿಟ್ಟುಕೊಡುತ್ತೇವೆ. ಆ ನಂಬಿಕೆಯನ್ನು ಮಾನ್ಯ ಸದಸ್ಯರು ಇಟ್ಟುಕೊಳ್ಳಬೇಕು.

ಹುಬ್ಬಳ್ಳಿ ಕ್ಷೇತ್ರದಲ್ಲಿ ಚಾಮುಂಡೇಶ್ವರಿ ಮತ್ತು ಮಾರುತಿ ನಗರ ಹೆಗ್ಗರೆ ಕೊಳಚೆ ಪ್ರದೇಶ ಕುರಿತು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಬರುವ ಚಾಮುಂಡೇಶ್ವರಿ ಮತ್ತು ಮಾರುತಿನಗರ ಹೆಗ್ಗರೆ ಎಂದು ಎರಡು ದೊಡ್ಡ ಕೊಳಚೆ ಪ್ರದೇಶಗಳು ಇವೆ. ಕಳೆದ 10-15ವರ್ಷಗಳಿಂದ ಅಲ್ಲಿಯ ನಾಗರೀಕರಿಗೆ ಯಾವುದೇ ವಿದ್ಯುಚ್ಛಕ್ತಿಯ ಸೌಕರ್ಯವಿಲ್ಲದೆ ಅವರು ಕತ್ತಲಲ್ಲಿದ್ದಾರೆ. ನಾನು ಕಳೆದೆರಡು ವರ್ಷಗಳಿಂದ ಅಲ್ಲಿ ವಿದ್ಯುಚ್ಛಕ್ತಿ ಸೌಕರ್ಯದ ಸಲುವಾಗಿ ಪ್ರಯತ್ನಮಾಡುತ್ತಿದ್ದೆ. ಮತ್ತು ಒಂದು ವರ್ಷದ ಹಿಂದೆ ಅಲ್ಲಿ ಹಣ ಮಂಜೂರಾಯಿತು. ಆ ವಿದ್ಯುಚ್ಛಕ್ತಿ ಸೌಕರ್ಯವನ್ನು ಕೊಡಲಿಕ್ಕೆ. ಆದರೆ ಟೆಂಡರ್ ಕರೆಯುವುದು ಮತ್ತು ಇನ್ನಿತರ ಆಫೀಷಿಯಲ್ ಕೆಲಸದ ಸಲುವಾಗಿ ಡಿಲೇಯಾಗಿ ಇವತ್ತಿನವರೆಗೂ ಕಾಮಗಾರಿ ಪ್ರಾರಂಭವಾಗಿಲ್ಲ. ಏಕೆಂದರೆ ಟೆಂಡರ್‌ನ್ನು ಆಕ್ಸೆಪ್ಟ್ ಮಾಡುವ ಸಲುವಾಗಿ ಬೆಂಗಳೂರಿಗೆ ಸೆಕ್ರೆಟರಿಯನ್ನು ಕರೆಸಬೇಕು. ಅಲ್ಲಿ ಹುಬ್ಬಳ್ಳಿಯಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಇದ್ದಾರೆ. ಅವರಿಗೆ ಈ ಅಧಿಕಾರವನ್ನು ಕೊಟ್ಟರೆ

ಅವರೇ ಎಲ್ಲಾ ಕೆಲಸವನ್ನು ಒಂದು ತಿಂಗಳಲ್ಲಿ ಮಾಡಬಹುದು. ತಕ್ಷಣ ಈ ಕಾಮಗಾರಿ ಪ್ರಾರಂಭ ಮಾಡಲಿಕ್ಕೆ ಮಾನ್ಯ ಸಚಿವರು ಪ್ರಯತ್ನಮಾಡಬೇಕು ಮತ್ತು ಆದೇಶ ಕೊಡಬೇಕೆಂದು ಹೇಳಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೇ, ಇವತ್ತೇ ಕಾರ್ಯದರ್ಶಿಯವರನ್ನು ಕರೆಸಿ ಇದನ್ನು ಆದಷ್ಟು ಬೇಗ ಹುಬ್ಬಳ್ಳಿಯಲ್ಲಿರುವ ಎರಡು ನಗರದಲ್ಲಿ ಕೆಲಸ ಪ್ರಾರಂಭ ಮಾಡಲಿಕ್ಕೆ ತಿಳಿಸುತ್ತೇನೆ.

ರಾಜ್ಯದಲ್ಲಿ ನೂರು ಬಾವಿ ಯೋಜನೆ ಕುರಿತು.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ನೂರು ಬಾವಿ ಮತ್ತು ಐಆರ್‌ಡಿಪಿ ಯೋಜನೆಗಳಿಂದ ಪಂಪಸೆಟ್ಟುಗಳನ್ನು ಸಣ್ಣ ರೈತರು ಮತ್ತು ಅತೀ ಸಣ್ಣ ರೈತರು ಅಂದರೆ ಬಡವರು ಪಡೆಯುತ್ತಾರೆ. ಈಗ ಏನಾಗಿದೆ ಎಂದರೆ ಅವರು ಈ ಯೋಜನೆಗಳು ರೈತರಿಗೆ ಪ್ರಯೋಜನಕ್ಕೆ ಬಾರದಂತಾಗಿದೆ. ಕಾರಣ ಈ ರೀತಿ ಪಡೆದ ರೈತರು ಪಂಪ್‌ಸೆಟ್ಟಿಗೆ ಸಂಪರ್ಕ ಕೊಡುವ ವ್ಯವಸ್ಥೆ ಇಲ್ಲ. ಆ ರೀತಿ ಕೊಡಬೇಕಾದರೆ ಅವರಿಗೆ ಹತ್ತು ಸಾವಿರ ರೂಪಾಯಿಗಳನ್ನು ಕಟ್ಟಬೇಕು ಅಥವಾ ಎಷ್ಟು ಎಸ್ಟಿಮೇಟ್ ಆಗಿದೆ, ಯಾವುದು ಜಾಸ್ತಿ ಇದೆ ಅಷ್ಟು ಹಣವನ್ನು ಕಟ್ಟಬೇಕು. ಅಷ್ಟು ಹಣ ಕಟ್ಟಬೇಕಾದರೆ ದೊಡ್ಡ ರೈತರೇ ಆಗಬೇಕು. ಸಣ್ಣ ರೈತರಿಗೆ ಕಟ್ಟಲಿಕ್ಕಾಗುವುದಿಲ್ಲ. ಈ ಯೋಜನೆಗಳು ನಿಜವಾಗಿಯೂ ಪ್ರಯೋಜನವಾಗಬೇಕಾದರೆ ಅವರಿಗೆ ಧರ್ಮಾರ್ಥವಾಗಿ ಅವರಿಗೆ ಸಂಪರ್ಕ ಕೊಡುವ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ದೊಡ್ಡ ರೈತರಿಗೆ ಮಾಡಿದ ವ್ಯವಸ್ಥೆಯನ್ನೇ ಸಣ್ಣ ರೈತರಿಗೂ ಮಾಡಿದರೆ ಈ ಯೋಜನೆ ಕೂಡ ಪ್ರಯೋಜನವಾಗುವುದಿಲ್ಲ. ಆದರಿಂದ ಐಆರ್‌ಡಿಪಿ ಮತ್ತು ನೂರು ಬಾವಿ ಯೋಜನೆಯಿಂದ ಯಾರು ಪಂಪಸೆಟ್ಟುಗಳನ್ನು ಪರ್ಚೇಸ್ ಮಾಡಿದ್ದಾರೆ. ಅವರಿಗೆ ಕೂಡಲೇ ಏನೂ ಹಣ ವಸೂಲು ಮಾಡದೇ ಕೊಡುವ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ನಾವು ಪ್ರೈಯಾರಿಟಿ ಲಿಸ್ಟ್ ಫಿಕ್ಸ್ ಮಾಡಿದ್ದೇವೆ. ಯಾರ್ಯಾರಿಗೆ ಕೊಳವೆ ಬಾವಿಗಳಿರುತ್ತವೆ ಅಂಥವರಿಗೆ ಪ್ರೈಯಾರಿಟಿ ಲಿಸ್ಟ್ ಫಿಕ್ಸ್ ಮಾಡಿದ ಪ್ರಕಾರ ನಾವು ಕೊಡುತ್ತೇವೆ. ಯಾರಿಗೆ ಅರ್ಜೆಂಟ್ ಇದೆಯೋ ಇಂಥವರು ಮಾತ್ರ ಹತ್ತು ಸಾವಿರ ರೂಪಾಯಿಗಳನ್ನು ತುಂಬಬೇಕೆಂದು ಇದೆ. ಐಆರ್‌ಡಿಪಿ ಮತ್ತು ನೂರುಬಾವಿ ಯೋಜನೆಗಳಲ್ಲಿ ನಾವು ಹಣವನ್ನು ತುಂಬಿದರೆ ಕನೆಕ್ಷನ್‌ನ್ನು ಕೊಡುತ್ತೇವೆಂದು ನಾವು ಎಲ್ಲಿಯೂ ಹೇಳಿಲ್ಲ. ಪ್ರೈಯರಿಟಿ ಲಿಸ್ಟ್ ಏನಾದರೂ ಬಿಟ್ಟು ಅವರಿಗೆ ಅರ್ಜೆಂಟ್ ಬೇಕಿದ್ದರೆ ಲೈನ್ ಅಂಡ್ ಎಸ್ಟಿಮೇಟ್ ಕಾಸ್ಟ್ ಅಥವಾ ಹತ್ತು ಸಾವಿರ ರೂಪಾಯಿಗಳಲ್ಲಿ ಯಾವುದು ಹೆಚ್ಚಿಗೆ ಇದೆ, ಅದನ್ನು ತುಂಬಿಸಿಕೊಂಡು ಕೊಡಬೇಕೆಂದು ಆಗಿದೆ. ಈಗಾಗಲೇ ಲಿಸ್ಟ್ ಪ್ರಕಾರ ನಾವೆಲ್ಲಾ ಕನೆಕ್ಷನ್‌ನ್ನು ಕೊಡುತ್ತೇವೆ.